C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

ಎಸ್.ಸಿ. ನಂ. 17/2022

ದಿನಾಂಕಃ 14.09.2023 ರಂದು ಪ್ರಮಾಣ ವಚನ ಬೋದಿಸಲಾಗಿದೆ

ಸಿ. ಡಬ್ಲ್ಯೂ: 2 ಪಿ. ಡಬ್ಲ್ಯೂ:3

| | |
|---|---|
| ಸಾಕ್ಷಿದಾರರ ಹೆಸರು | ಭಾಗ್ಯಮ್ಮ |
| ಗಂಡನ ಹೆಸರು | ರಂಗಸ್ವಾಮಿ ಟಿ |
| ವಯಸ್ಸು | 43 ವರ್ಷ |
| ಉದ್ಯೋಗ | ಗೃಹಿಣಿ |
| ವಾಸ | ದೊಡ್ಡೇಗೌಡನಕೊಪ್ಪಲು |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

1) ಚಾಸಾ 1 ನನ್ನ ಮಗ. ಚಾಸಾ 5 ನನ್ನ ಮಗಳು. ಚಾಸಾ 3 ನಮ್ಮ ಊರಿನವರು ಚಾಸಾ 4 ನಮ್ಮ ಊರಿನವರು. ನ್ಯಾಯಾಲಯದ ಮುಂದೆ ಇರುವ 5 ಜನ ಆರೋಪಿತರು ಗೊತ್ತು. ಆರೋಪಿಗಳ ಹೆಸರು ಕೆಂಪೇಗೌಡ, ವಿಜಯಲಕ್ಷ್ಮಿ, ವಿದ್ಯಾ, ಕೃಷ್ಣೇಗೌಡ ಹಾಗೂ ವಿನಯ್. ಆರೋಪಿತರೆಲ್ಲರೂ ನನ್ನ ಸಂಬಂಧಿಕರು. ಆರೋಪಿತರು ನನಗೆ ಮೈದ, ವಾರಗಿತ್ತಿ ಆಗಬೇಕು.

2) ದಿಃ 21.05.2020 ರಂದು ಸಂಜೆ 6.00 ಗಂಟೆಯಲ್ಲಿ ಕೊಟ್ಟಿಗೆ ಹತ್ತಿರ ಗಲಾಟೆ ಆಗುತ್ತಿದುದು ನನಗೆ ಕೇಳಿಸಿತು. ಗಲಾಟೆಯಲ್ಲಿ ನನ್ನ ಮಗನಾದ ಚಾಸಾ 1 ರವರು ಬಾಯಿ ಬಡಿದುಕೊಳ್ಳುತ್ತಿದ್ದುದು ಕೇಳಿಸಿತು. ಆಗ ನಾನು ನಮ್ಮ ಮನೆಯ ಒಳಗೆ ಇದ್ದೆನು. ಮನೆಯಲ್ಲಿ ನನ್ನ ಯಜಮಾನರು ಮತ್ತು ನನ್ನ ಮಗಳು ಇದ್ದರು. ನಾನು ಮತ್ತು ಚಾಸಾ 3 ರವರು ಕೊಟ್ಟಿಗೆ ಹತ್ತಿರ ಹೋದೆವು. ಆಗ ಅಲ್ಲಿ ಆರೋಪಿತರಾದ ಕೆಂಪೇಗೌಡ, ವಿಜಯಲಕ್ಷ್ಮಿ, ವಿದ್ಯಾ, ಕೃಷ್ಣೇಗೌಡ

ಹಾಗೂ ವಿನಯ್, ಚಾಸಾ 1 ರವರಿಗೆ ಹೊಡೆಯುತ್ತಿದ್ದರು, 1 ನೇ ಆರೋಪಿತ ಕೆಂಪೇಗೌಡ ನ ಕೈಯ್ಯಲ್ಲಿ ಕುಡಗೋಲು ಇತ್ತು. 2 ನೇ ಆರೋಪಿತೆ ವಿದ್ಯಾ ಕೈಯಲ್ಲಿ ದೊಣ್ಣೆ ಇತ್ತು. ನಾನು ಮತ್ತು ಚಾಸಾ 3 ರವರು, ಚಾಸಾ 1 ರವರನ್ನು ಗಲಾಟೆ ಬಿಡಿಸಿಕೊಂಡು ಬಂದೆವು. ಆಗ 5 ಜನ ಆರೋಪಿತರು ನಮ್ಮ ಹಿಂದೆಗಡೆ ಬಂದು, 5 ನೇ ಆರೋಪಿತನಾದ ಕೃಷ್ಣೇಗೌಡ, 1 ನೇ ಆರೋಪಿತರಾದ ಕೆಂಪೇಗೌಡನಿಗೆ, ಇವರು ಇದ್ದರೆ ತಾನೇ ಈ ರೋಡ್ ನಲ್ಲಿ ಓಡಾಡುವುದು , ಇವರನ್ನು ಸಾಯಿಸಿಬಿಡು ಎಂದು ಹೇಳಿದನು. 1 ನೇ ಆರೋಪಿತರಾದ ಕೆಂಪೇಗೌಡ , ಕುಡುಗೋಲಿನಿಂದ ಚಾಸಾ 1 ರವರಿಗೆ ತಲೆಗೆ ಹೊಡೆಯಲು ಬಂದಾಗ ನನ್ನಮಗ ಬಲ ಕೈಯನ್ನು ಅಡ್ಡ ಕೊಟ್ಟಿದ್ದನು. ಆಗ ಆತನ ಬಲಗೈ ನ ಮುಂಗೈ ಮತ್ತು ಮೊಣಕೈಗೆ ಏಟು ಬಿದ್ದು ಗಾಯವಾಯಿತು. ಆಗ ಚಾಸಾ 1 ರವರು ಕೆಳಗೆ ಕುಳಿತುಕೊಂಡನು, ಆಗ 2 ನೇ ಆರೋಪಿತೆ ವಿದ್ಯಾ ಚಾಸಾ 1 ರವರ ಬೆನ್ನಿಗೆ ದೊಣ್ಣೆಯಿಂದ ಹೊಡೆದಳು. 3 ನೇ ಆರೋಪಿತೆ ವಿಜಯಲಕ್ಷ್ಮಿ ಕಾಲಿನಿಂದ ಚಾಸಾ 1 ರವರ ಬೆನ್ನಿಗೆ ಒದ್ದಳು. 4 ನೇ ಆರೋಪಿತ ವಿನಯ್, ಚಾಸಾ 1 ರವರನ್ನು ಕುರಿತು, ಸೂಳೆ ಮಗನೇ, ಬೋಳಿ ಮಗನೇ, ರೋಡಲ್ಲಿ ತಿರುಗಾಡಬೇಡ ಎಂದರೂ ತಿರುಗಾಡುತ್ತಿದ್ದೀಯಾ ಎಂದು ಬೈದನು. ಚಾಸಾ 3 ಮತ್ತು ಚಾಸಾ 4 ರವರು, ಚಾಸಾ 1 ರವರನ್ನು ಬಿಡಿಸಿಕೊಂಡು, ಚಿಕಿತ್ಸೆಗಾಗಿ ಚುಂಚನಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆರೋಪಿತರು, ಈ ಸಲ ಗೆದ್ದು ಹೋದಿರಿ, ತಿರುಗಾಡಬೇಡ ಎಂದರೂ, ಈ ರೋಡ್ ನಲ್ಲಿ ತಿರುಗಾಡುತ್ತೀಯಾ, ಮತ್ತೆ ಈ ರೋಡ್ ಗೆ ಬಂದರೆ ನಿನ್ನನ್ನು ಸಾಯಿಸಿಬಿಡುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿ ಹೆದರಿಸಿದರು.

3) 1 ನೇ ಆರೋಪಿತ, ಚಾಸಾ 1 ರವರನ್ನು ಕೊಲೆ ಮಾಡಬೇಕು ಎಂಬ ಉದ್ದೇಶ ಇಟ್ಟುಕೊಂಡು ಕುಡುಗೋಲನ್ನು ಅವನ ತಲೆಗೆ ಬೀಸಿದನು. ಚಾಸಾ 1 ರವರು, ಕುಡುಗೋಲು ಬೀಸಿದ್ದನ್ನು

ಅವರ ಬಲಗೈಯಿಂದ ತಡೆಯದಿದ್ದರೆ ಅವರ ಕೊಲೆಯಾಗುತ್ತಿತ್ತು. ಕುಡಗೋಲು ಮತ್ತು ದೊಣ್ಣೆಯನ್ನು ಈಗ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು ಮಾ 1 ದೊಣ್ಣೆ ಮತ್ತು ಮು ಮಾ 2 ಕುಡಗೋಲನ್ನು ನೋಡಿ ಗುರುತಿಸುತ್ತಾರೆ.

4) ಪೊಲೀಸರು ಪ್ರಕರಣದ ಬಗ್ಗೆ ನನ್ನನ್ನು ವಿಚಾರಿಸಿ ನನ್ನ ಹೇಳಿಕೆಯನ್ನು ಪಡೆದುಕೊಂಡರು.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರು, ಈ ನ್ಯಾಯಾಲಯದ ದಿಃ 03.07.2023 ರ ಆದೇಶದ ಪ್ರಕಾರ ಪಾಟೀ ಸವಾಲಿಗೆ ಸಮಯವನ್ನು ಕೋರಿರುತ್ತಾರೆ. ನೀಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.